ದಿನಾಂಕ: 27 ಏಪ್ರಿಲ್ 2014

# ಪ್ರಚಾರ ದಿನಚರಿ–27/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಕಾಂಗ್ರೆಸ್ ಪಕ್ಷ ವ್ಯತಿರಿಕ್ತ ಪರಿಸ್ಥಿತಿ ಎದುರಿಸುತ್ತಿದೆ. ಕೇವಲ ಎರಡಂಕಿಗೆ ಅದರ ಬಲಾಬಲ ಕುಗ್ಗುವ ಕಟು ವಾಸ್ತವಿಕೆಯನ್ನು ಒಪ್ಪಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಎರಡಂಕಿ ಬಲಾಬಲ ಹೊಂದುವ ಪಕ್ಷ ವಾಸ್ತವಿಕತೆಯನ್ನು ಒಪ್ಪಿಕೊಂಡು ಭವಿಷ್ಯ ನಿರ್ಧರಿಸಬೇಕು. ಹೇಗಿದ್ದರು ರಾಜಕೀಯ ಕ್ಯಾಲೆಂಡರ್‌ನಲ್ಲಿ ಕಡೆದಿನವಿರುವುದಿಲ್ಲ.

ಆದರೆ ಚಿರತೆ ತನ್ನ ಶರೀರದ ಗುರುತು ಬದಲಾಯಿಸುವುದಿಲ್ಲ. ಆಳ್ವಿಕೆ ನಡೆಸಲೆಂದೆ ಹುಟ್ಟಿದ ಪಕ್ಷ ಎಂಬ ಧೋರಣೆ ಅದಕ್ಕಿದೆ. ಮತ್ತೊಂದು ಪಕ್ಷ ಸರ್ಕಾರದ ಚುಕ್ಕಾಣಿ ಹಿಡಿಯುವುದು ಅದು ಸಹಿಸದು. ಅದರಲ್ಲೂ ನರೇಂದ್ರ ಮೋದಿ ಅಂತು ಅವರಿಗೆ ಅಸಹನೀಯ. ಕಳೆದ 12 ವರ್ಷಗಳ ದೀರ್ಘಾವಧಿವರೆಗು ಸುಳ್ಳು ಆರೋಪಗಳನ್ನು ಮೋದಿ ಮೇಲೆ ಹೊರಿಸಿದ ಪಾಪಪ್ರಜ್ಞೆ ಕಾಡುತ್ತಿರುವ ಕಾಂಗ್ರೆಸ್ಸಿಗರ ಮನಸ್ಸಿನಲ್ಲಿ ಮೋದಿ ಕುರಿತು ಆಂಜಿಕೆ ಮನೆಮಾಡಿದೆ. ಆದ್ದರಿಂದಲೇ ಮೋದಿ ವಿಚಾರದಲ್ಲಿ ತಾರ್ಕಿಕ ನೆಲೆ ಮೀರಿದ ಕಟು ಟೀಕೆಗಳು ಗಾಂಧಿ ಕುಟುಂಬದಿಂದ ಕೇಳಿ ಬರುತ್ತಿವೆ.

ತ್ರಿತೀಯ ರಂಗಕ್ಕೆ ಕಾಂಗ್ರೆಸ್ ಸಮರ್ಥನೆ ನೀಡುವ ಆಲೋಚನೆ ಮಡಿದೆ ಎಂದು ಸಲ್ಮಾನ್ ಖುರ್ಷೀದ್ ನುಡಿದಾಗ ಅವರಲ್ಲಿ ಸೋಲಿನ ಭೀತಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈ ಬಾರಿ ಅವರಿಗೆ ಹೆಚ್ಚಿನ ಸಂಖ್ಯೆ ದೊರೆಯುವುದು ದುರ್ಲಭ ಎಂಬ ಮುನ್ಸೂಚನೆಯಿದ್ದು, ಅದೃಷ್ಟವಶಾತ್ ಅವರ ರಾಜಕೀಯ ಕುಟಿಲತನ ಫಲಿಸದು. ಅವರ ಕುಟಿಲ ಬುದ್ಧಿಯನ್ನು ಅರಿತಿರುವ ಮತದಾರರು ನಮಗೆ ಸ್ಪಷ್ಟ ಬಹುಮತ ನೀಡಲು ನಿರ್ಧರಿಸಿದ್ದಾರೆ. ಕಾಂಗ್ರೆಸ್ ಪಕ್ಷದೊಂದಿಗೆ ತ್ರಿತೀಯ ರಂಗ ಹುಟ್ಟುಹಾಕುವ ಆಲೋಚನೆ ಮಾಡುತ್ತಿರುವವರು ಈ ಹಿಂದೆ ವಿಫಲವಾದ ರಾಜಕೀಯ ಹೊಂದಾಣಿಕೆಗೆ ಜೀವ ಕೊಡುವ ಪ್ರಯತ್ನದಲ್ಲಿದ್ದಾರೆ. ಸೈದ್ಧಾಂತಿಕ ಭಿನ್ನಮತ ಉಳ್ಳ ಪಕ್ಷಗಳ ಸಮ್ಮಿಲನ ಕೇವಲ ಅನುಕೂಲಸಿಂಧು ರಾಜಕಾರಣಕ್ಕೆ ಎಡೆಮಾಡಿಕೊಡುತ್ತದೆ. ಇದರಿಂದ ಉತ್ತಮ ಆಡಳಿತ ಬಯಸುವುದು ನಿರರ್ಥಕ. ಆರ್ಥಿಕ ಅಸ್ಥಿರತೆಗಾಗಿಯೇ ಕೆಲವು ಪಕ್ಷಗಳು ಹಾತೊರೆಯುತ್ತವೆ. ಆಗ ಮಾತ್ರ ಅವರ ಅಸ್ತಿತ್ವಕ್ಕೆ ಬೆಲೆ ಬರುತ್ತದೆ. ಕಾಂಗ್ರೆಸ್ ಸೇರಿದಂತೆ ಅಸ್ಥಿರತೆಯ ವರ್ತಕರನ್ನು ಮತದಾರರು ಸೋಲಿಸಿ ಪ್ರೌಢಿಮೆ ಮೆರೆಯುತ್ತಾರೆ ಎಂಬ ವಿಶ್ವಾಸ ನನ್ನದು.

ವಿಚಾರವಂತಿಕೆ ತೋರದ ಕ್ಯಾಪ್ಟನ್

ಕ್ಯಾಪ್ಟನ್ ಅಮರಿಂದರ್ ಸಿಂಗ್ ಚುನಾವಣಾ ಕಣದ ಪ್ರಬಲ ಪ್ರತಿಸ್ಪರ್ಧಿ ಎಂದು ತಿಳಿಸಲು ಪ್ರಾರಂಭಿಕ ಹಂತದಲ್ಲಿ ಅವರು ನೀಡಿದ ಪತ್ರಿಕಾ ಹೇಳಿಕೆಗಳು ಹಾಗೂ ಕಲ್ಪಿತ ವಿಚಾರಗಳು ಸುದ್ದಿಯಾಗಲು ಮುಖ್ಯ ಕಾರಣವಾದವು. ಆದರೆ ನಂತರದ ದಿವಸಗಳಲ್ಲಿ ಕ್ಯಾಪ್ಟನ್ ದೌರ್ಬಲ್ಯ ಕಾಣಲಾರಂಭಿಸಿತು. ರಾಷ್ಟ್ರೀಯ ವಿಚಾರಗಳನ್ನು ಚರ್ಚಿಸುವ ಸಾಮರ್ಥ್ಯ ಅವರಲಿಲ್ಲ. ಲೋಕ ಸಭಾ ಚುನಾವಣೆಗಳು ನಡೆಯುತ್ತಿರುವ ಪ್ರಸ್ತುತ ರಾಜಕೀಯ ಸನ್ನಿವೇಶಗಳಿಗೆ ಹೊಂದಾಣಿಕೆ ಆಗದ ಕೆಲವಾರು ಮೂರು ನಾಲ್ಕು ವಿಚಾರಗಳನ್ನೇ ಅವರು ಪುನರಾವರ್ತಿಸುತ್ತಿದ್ದಾರೆ.

ಗಿಣಿಪಾಠದಂತಿರುವ ಅವರ ಹೇಳಿಕೆಗಳು, ಒಂದು ಹಂತದಲ್ಲಿ, ಸುದ್ದಿ ಮಾಡುವುದನ್ನೆ ನಿಲ್ಲಿಸಿದೆ. ಇದರಿಂದ ಚುನಾವಣಾ ರಣರಂಗ ರೋಚಕತೆ ಕಳೆದುಕೊಂಡು ಬೀದಿಕಲಹದಂತಾಗಿದೆ.

ಹಲವಾರು ಜನಪ್ರಿಯ ವ್ಯಕ್ತಿಗಳು ನನ್ನ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದರು ಎಂದು ಕ್ಯಾಪ್ಟನ್ ದೂರಿದ್ದಾರೆ. ಅವರ ಹೇಳಿಕೆ ಸರಿಯಾಗಿದೆ. ಹಲವಾರು ಕುಟುಂಬ ಸದಸ್ಯರು, ರಾಜಕೀಯ ಸ್ನೇಹಿತರು ಹಾಗೂ ಸಾಧಕರು ನನ್ನ ಪರ ಪ್ರಚಾರ ನಡೆಸಿದ್ದಾರೆ. ನನ್ನ ರಾಜಕೀಯ ಸಹುದ್ಯೋಗಿಗಳು ಮತ್ತು ನಾಯಕರು ತಮ್ಮ ಶ್ರಮ ನೀಡಿದ್ದಾರೆ. ಆದರೆ ಕ್ಯಾಪ್ಟನ್ ಅವರ ಪರ ಪ್ರಚಾರ ನಡೆಸಲು ಹಿರಿಯ ಕಾಂಗ್ರೆಸ್ ನಾಯಕರು ಒಪ್ಪದೆಯಿರಲು ಕಾರಣವೇನು? ಶ್ರೀ ಆನಂದ್ ಶರ್ಮಾಕ್ಕಿಂತ ಉತ್ತಮರಾದವರು ಅವರಿಗೆ ಸಿಗಲಿಲ್ಲವೇ?

✲✲✲✲✲